**ದಿನಾಂಕ: 08.03.2021 ರಂದು ವಾರ್ಡ್ ಸಂಖ್ಯೆ 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀಮತಿ ಚೈತ್ರಾ ಹೊನ್ನಾಪುರ– ವಾರ್ಡ್ ಸಮಿತಿ ನೋಡಲ್ ಅಧಿಕಾರಿ
2. ಶ್ರೀ ನರೇಂದ್ರ ಕುಮಾರ್.ಎ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 184 ಉತ್ತರಹಳ್ಳಿ)
3. ಶ್ರೀ ಜಗದೀಶ್.ಹೆಚ್.ಆರ್ – ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೆಸ್ಕಾಂ,
4. ಶ್ರೀ ಸುದರ್ಶನ್.ಎನ್.ಪಿ – ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
5. ಶ್ರೀ ರವೀಂದ್ರ – ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
6. ಶ್ರೀ ಮೋಸಿಸ್ – ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
7. ಶ್ರೀಮತಿ ಗಂಗಮ್ಮ – ಸಬ್ ಇನ್ಸ್‌ಪೆಕ್ಟರ್ ಕುಮಾರಸ್ವಾಮಿ ಲೇಔಟ್ ಟ್ರಾಫಿಕ್ ವಿಭಾಗ
8. ಶ್ರೀ ಮಂಜುನಾಥ್.ವಿ – ಹೆಡ್ ಕಾನ್ಸ್‌ಟೇಬಲ್, ಕುಮಾರಸ್ವಾಮಿ ಲೇಔಟ್ ಟ್ರಾಫಿಕ್ ವಿಭಾಗ

**ಹಾಜರಿದ್ದ ಸಮಿತಿ ಸದಸ್ಯರು:-**

1. ಶ್ರೀ ನಾಗರಾಜ್ ಹೆಗ್ಡೆ–ಫಾರ್ಮ್ ಗ್ರೂವ್ ಎನ್‌ಕ್ಲೇವ್ RWA
2. ಶ್ರೀ ಅರುಣ್ – ಎ.ಜಿ.ಎಸ್ ಬಡಾವಣೆ RWA
3. ಶ್ರೀ ಅಮರ್.ಎಂ.ಆರ್ – ಎ.ಜಿ.ಎಸ್ ಬಡಾವಣೆ RWA
4. ಶ್ರೀ ಸುನಿಲ್ ಪೊನ್ನನ್ನ – ಜಯನಗರ ಹೌಸಿಂಗ್ ಬಡಾವಣೆ RWA
5. ಶ್ರೀಮತಿ ಸುಮಾ ನಾಗರಾಜ – ಜಯನಗರ ಹೌಸಿಂಗ್ ಬಡಾವಣೆ RWA
6. ಶ್ರೀ ಗೌತಮ್ ಕೆ – ಲಿಬರ್ಟಿ ಸ್ಕ್ವೇರ್ ವಸತಿ ಸಮುಚ್ಚಯ 80 ಅಡಿ ರಸ್ತೆ RWA

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀಮತಿ ಚೈತ್ರಾ ಹೊನ್ನಾಪುರ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸ್ರಚಿಸಲಾಗಿರುತ್ತದೆ.

1. **ಬೆಂಗಳೂರು ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

- ಜಯನಗರ ಹೆಚ್.ಬಿ.ಎಸ್.ಎಸ್ ಬಡಾವಣೆ 11ನೇ ಮುಖ್ಯರಸ್ತೆಯಲ್ಲಿ, ಮನೆ ನಂ. 431, 433 ಬಳಿಯ ಚೇಂಬರ್‌ಗೆ ಕವರ್ ಅಳವಡಿಸಲು ಕೋರಿರುತ್ತಾರೆ.
- ಪ್ರೈಡ್ ವಸತಿ ಸಮುಚ್ಚಯದಿಂದ ಬಿಡುತ್ತಿರುವ ಹೆಚ್ಚುವರಿ ನೀರಿನಿಂದಾಗಿ ಜಯನಗರ ಹೆಚ್.ಬಿ.ಸಿಎಸ್ ಬಡಾವಣೆಯ 5ನೇ ಮುಖ್ಯರಸ್ತೆಯಲ್ಲಿನ ಚೇಂಬರ್‌ಗಳು ತುಂಬಿ ಹರಿಯುತ್ತಿರುವ ಬಗ್ಗೆ ದೂರಿರುತ್ತಾರೆ.
- ಕರೀಷ್ಮಾ ಹಿಲ್ಸ್ ಬಳಿಯ ಚೈತ್ರ ಸ್ಟೋರ್ಸ್ ಹತ್ತಿರ ಕೂಡ ಚೇಂಬರ್‌ಗಳು ತುಂಬಿ ಹರಿಯುತ್ತಿರುವ ಬಗ್ಗೆ ದೂರಿರುತ್ತಾರೆ.

Scanned with CamScanner

- 80 ಅಡಿ ಬಿಡಿಎ ರಸ್ತೆ ಹಾಗೂ ಪೈಪಲೈನ್ ರಸ್ತೆ ಬಳಿ ಸ್ಯಾನಿಟರಿ ಕೊಳವೆ ಮಾರ್ಗಗಳು ಸಮರ್ಪಕವಾಗಿ ಇಲ್ಲದೇ ಇರುವುದರಿಂದ ಇಲ್ಲಿ ಒಳಚರಂಡಿ ನೀರು ರಸ್ತೆಯಲ್ಲಿ ಹರಿಯುತ್ತಿರುವ ಬಗ್ಗೆ ದೂರಿರುತ್ತಾರೆ.
- ಎಸ್.ಜಿ.ಎಸ್ ಬಡಾವಣೆ 19ನೇ, 20ನೇ, 21ನೇ ಮತ್ತು 22ನೇ ಮುಖ್ಯರಸ್ತೆಯಲ್ಲಿ ಒಳಚರಂಡಿ ನೀರು ರಸ್ತೆಯಲ್ಲಿಯೇ ಹರಿಯುತ್ತಿರುವ ಬಗ್ಗೆ ದೂರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ 17ನೇ ಮುಖ್ಯರಸ್ತೆಯಲ್ಲಿ ಒಳಚರಂಡಿ ಪೈಪುಗಳು ಹಾಳಾಗಿದ್ದು, ಇದನ್ನು ದುರಸ್ಥಿಗೊಳಿಸಲು ಕೋರಿರುತ್ತಾರೆ.

ಈ ಬಗ್ಗೆ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ರವರಿಗೆ ಸೂಚಿಸಿರುತ್ತಾರೆ.

2. **ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

- 11ಕೆ.ವಿ.ಎ ಕೇಬಲ್ ಅಳವಡಿಸುವುದಕ್ಕಾಗಿ ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಡಾಂಬರೀಕರಣ ಮಾಡಿರುವ ರಸ್ತೆಗಳನ್ನು ಸಹ ಅಗೆದಿದ್ದು, ಕೂಡಲೇ ಸದರಿ ರಸ್ತೆ ಅಗೆತಗಳನ್ನು ಪುನರ್ ಡಾಂಬರೀಕರಣಗೊಳಿಸಲು ಕೋರಿರುತ್ತಾರೆ.
- ಬೆಸ್ಕಾಂ ಇಲಾಖೆಯಿಂದ ಅಂತರ್ಗತ ಕೇಭಲ್ ಅಳವಡಿಸಲು ವಾರ್ಡ್ ವ್ಯಾಪ್ತಿಯ ಅರೆಹಳ್ಳಿ ಮತ್ತು ಉತ್ತರಹಳ್ಳಿ ಪ್ರದೇಶದಲ್ಲಿ ಮಾಡಿರುವಂತಹ ರಸ್ತೆ ಗುಂಡಿಗಳು, ಉದ್ದದ ರಸ್ತೆ ಅಗೆತಗಳನ್ನು ಕೂಡಲೇ ಪುನರ್ ನಿರ್ಮಿಸಿ ಡಾಂಬರುಅನ್ನು ಅಳವಡಿಸಬೇಕಾಗಿ ಸಾರ್ವಜನಿಕರು ಕೋರಿರುತ್ತಾರೆ.
- ಕೇಬಲ್ ಅಳವಡಿಸುವ ಕಾಮಗಾರಿಯಲ್ಲಿ ಬಹುತೇಕ ಕಡೆಯಲ್ಲಿ ಹೆಚ್ಚುವರಿ ಕೇಬಲ್‌ಗಳನ್ನು ರಸ್ತೆ ಭಾಗದಲ್ಲಿ ಸುತ್ತಿ ಇಟ್ಟಿದ್ದು, ಇದರಿಂದಾಗಿ ವಾಹನ ಸವಾರರಿಗೆ ಹಾಗೂ ಪಾದಚಾರಿಗಳಿಗೆ ತೊಂದರೆಯಾಗುತ್ತಿರುತ್ತದೆ ಎಂದು ದೂರಿರುತ್ತಾರೆ.
- ಪ್ರೈಡ್ ವಸತಿ ಸಮುಚ್ಚಯದ ಟ್ರಾನ್ಸ್‌ಫರ್ ಅನ್ನು ದುರಸ್ಥಿಗೊಳಿಸಲು ತೆಗೆದುಕೊಂಡು ಹೋಗಿದ್ದು, ಇದುವರೆಗೆ ಸದರಿ ಟ್ರಾನ್ಸ್‌ಫರ್‌ಮರ್ ಪುನರ್ ಅಳವಡಿಸದೇ ಇರುವ ಬಗ್ಗೆ ದೂರಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಕಿಡಿಗಳನ್ನು ತಡೆಯಲು ಮರಗಳ ಟ್ರಿಮ್ಮಿಂಗ್ ಕೈಗೊಳ್ಳಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ 5ನೇ 3ನೇ ಹಾಗೂ 17ನೇ ಮುಖ್ಯರಸ್ತೆಯಲ್ಲಿ ಹೊಸ ಕಂಬಗಳನ್ನು ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

3. **ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಪಟ್ಟಂತೆ.**

- ಜೆ.ಹೆಚ್.ಬಿ.ಸಿ.ಎಸ್ ಬಡಾವಣೆಯಲ್ಲಿ ಒಟ್ಟು 63 ಹೊಸ ಬೀದಿ ದೀಪಗಳ ಅವಶ್ಯಕತೆ ಇರುತ್ತದೆ ಎಂದು ಕೋರಿರುತ್ತಾರೆ.
- ಗುಬ್ಬಲಾಳ ಮುಖ್ಯರಸ್ತೆಯಲ್ಲಿ ಹಾಗೂ ಜಯನಗರ ಹೆಚ್.ಬಿ.ಸಿ.ಎಸ್ ಹೊಂಗನಸು ಕಟ್ಟಡ (ಐಯ್ಯಂಗಾರ್ ಬೇಕರಿ) ಹತ್ತಿರ ಹಾಗೂ ಗುಬ್ಬಲಾಳ ಮುಖ್ಯರಸ್ತೆ ಆಂಜನೇಯ ದೇವಸ್ಥಾನ ಬಳಿ ಹೊಸ ಬೀದಿ ದೀಪಗಳ ಅವಶ್ಯಕತೆ ಇರುತ್ತದೆ ಎಂದು ಕೋರಿರುತ್ತಾರೆ.
- ಬಿಡಿಎ ಬಡಾವಣೆ 80 ಅಡಿ ರಸ್ತೆಯಲ್ಲಿ ಯಾವುದೇ ಬೀದಿ ದೀಪ ಇರುವುದಿಲ್ಲವೆಂದು ಕೂಡಲೇ ಸದರಿ ರಸ್ತೆಯಲ್ಲಿ ಬೀದಿ ದೀಪ ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಎಲೆಕ್ಟ್ರಿಕಲ್ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ.

Scanned with CamScanner

4. **ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ**

- ಜಯನಗರ ಹೆಚ್.ಬಿ.ಸಿ.ಎಸ್ ಬಡಾವಣೆಯ ಸಿ.ಎ ನಿವೇಶನ (ಪ್ರತ್ಯಾಂಗಿರಿ ದೇವಸ್ಥಾನದ ಹತ್ತಿರ)ದಲ್ಲಿ ಪೌರಕಾರ್ಮಿಕರು ಅಳವಡಿಸಿರುವ ಶೆಡ್‌ಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಪ್ರತ್ಯಂಗಿರಿ ದೇವಸ್ಥಾನದ ಹತ್ತಿರ ನಿರ್ಮಿಸಿರುವ ಶೌಚಾಲಯವನ್ನು ನಿರ್ವಹಣೆ ಮಾಡದೇ ಇರುವ ಬಗ್ಗೆ ದೂರಿರುತ್ತಾರೆ.
- ಗುಬ್ಬಲಾಳ ಮತ್ತು ತುರಹಳ್ಳಿ ಗ್ರಾಮದಲ್ಲಿ ಘನತ್ಯಾಜ್ಯವನ್ನು ಸಮರ್ಪಕವಾಗಿ ಮನೆಗಳಿಂದ ಸಂಗ್ರಹಣೆ ಮಾಡದೇ ಇರುವ ಬಗ್ಗೆ ದೂರಿರುತ್ತಾರೆ.
- ವಾರ್ಡ್ ವ್ಯಾಪ್ತಿಯ ಅಲ್ಲಲ್ಲಿ ಘನತ್ಯಾಜ್ಯ ಹಾಗೂ ಮರದ ಎಲೆಗಳಿಗೆ ಬೆಂಕಿ ಹಚ್ಚುವುದನ್ನು ತಡೆಗಟ್ಟಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಹಾಗೂ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ರವರಿಗೆ ಸೂಚಿಸಿರುತ್ತಾರೆ.

5. **ಟ್ರಾಫಿಕ್ ಪೋಲೀಸ್ ಠಾಣೆಗೆ ಸಂಬಂಧಪಟ್ಟಂತೆ**

- 80 ಅಡಿ ರಸ್ತೆಯಿಂದ ಗುಬ್ಬಲಾಳ ಗ್ರಾಮದ ಆಂಜನೇಯ ದೇವಸ್ಥಾನದ ಕಡೆಗೆ ರಸ್ತೆಯ 2 ಬದಿಯಲ್ಲಿ ವಾಹನಗಳು ನಿಲುಗಡೆ ಮಾಡುತ್ತಿದ್ದು, ಇದರಿಂದ ಈ ರಸ್ತೆ ಭಾಗದಲ್ಲಿ ಅತ್ಯಧಿಕ ಟ್ರಾಫಿಕ್ ಜಾಮ್ ಆಗುತ್ತಿದ್ದು, ಇದನ್ನು ತಡೆಗಟ್ಟಲು ಕೋರಿರುತ್ತಾರೆ.
- ಗುಬ್ಬಲಾಳ ಮುಖ್ಯರಸ್ತೆಯಲ್ಲಿ ನೋ ಪಾರ್ಕಿಂಗ್ ಬೋರ್ಡ್ ಅಳವಡಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ 5ನೇ ಮುಖ್ಯರಸ್ತೆ, 3ನೇ ಮುಖ್ಯರಸ್ತೆ ಮತ್ತು 17ನೇ ಮುಖ್ಯರಸ್ತೆಯಲ್ಲಿ ಪೂರ್ಣಪ್ರಜ್ಞಾ ಬಡಾವಣೆಯಿಂದ ಅತ್ಯಧಿಕ ವಾಹನಗಳು ಸಂಚರಿಸುತ್ತಿದ್ದು, ಈ ರಸ್ತೆಗಳಲ್ಲಿ ರಸ್ತೆ ಹಂಪ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ವಸತಿ ಪ್ರದೇಶದಲ್ಲಿ ಟ್ರಾಕ್ಟರ್‌ಗಳ ಚಾಲನೆಯನ್ನು ಮಿತಿಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಇನ್ಸ್‌ಪೆಕ್ಟರ್ ಕುಮಾರಸ್ವಾಮಿ ಬಡಾವಣೆ ಸಂಚಾರಿ ಪೊಲೀಸ್ ಠಾಣೆ ರವರಿಗೆ ಸೂಚಿಸಿರುತ್ತಾರೆ.

6. **ಉತ್ತರಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಂತೆ**

- ಎ.ಜಿ.ಎಸ್ ಬಡಾವಣೆ 21ನೇ ಮುಖ್ಯರಸ್ತೆಯಲ್ಲಿ ದುರಸ್ಥಿಗೊಂಡಿರುವ ಒಳಚರಂಡಿ ಪೈಪುಗಳನ್ನು ಬದಲಾಯಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ 21ನೇ ಮತ್ತು 22ನೇ ಮುಖ್ಯರಸ್ತೆಯಲ್ಲಿ ಕಲ್‌ವರ್ಟ್‌ಗಳನ್ನು ನಿರ್ಮಾಣ ಮಾಡಲು ಕೋರಿರುತ್ತಾರೆ ಹಾಗೂ ಸದರಿ ರಸ್ತೆ ಬದಿ ಚರಂಡಿಯ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಗುಬ್ಬಲಾಳ ಮುಖ್ಯರಸ್ತೆ ಶೂಟಿಂಗ್ ಹೌಸ್‌ನಿಂದ ಚಾರ್ಟೆಡ್ ಬೆವರಲಿ ವಸತಿ ಸಮುಚ್ಚಯದ ಕಡೆಗೆ ಹಾದು ಹೋಗುವ ರಸ್ತೆಯನ್ನು ಡಾಂಬರೀಕರಣಗೊಳಿಸಲು ಕೋರಿರುತ್ತಾರೆ.
- 80 ಅಡಿ ರಸ್ತೆಯಿಂದ ವೀರಾಂಜನೇಯನಗರಕ್ಕೆ ಹೋಗುವ ರಸ್ತೆಯನ್ನು ಡಾಂಬರೀಕರಣಗೊಳಿಸಲು ಕೋರಿರುತ್ತಾರೆ.
- ರಾಘವೇಂದ್ರ ಬಡಾವಣೆ ಗುಬ್ಬಲಾಳದಲ್ಲಿ ಬಾಕಿ ಇರುವ ರಸ್ತೆಗಳಿಗೆ ಡಾಂಬರೀಕರಣ ಮಾಡಬೇಕಾಗಿ ಕೋರಿರುತ್ತಾರೆ.
- ಪ್ರೆಸ್ಟೀಜ್ ವಸತಿ ಸಮುಚ್ಚಯದ ಮುಂಭಾಗದಲ್ಲಿ ಉಪಯೋಗಿಸದ / ಹಾಳಾಗಿರುವ ಕೊಳವೆ ಬಾವಿಯ ಪೈಪುಗಳನ್ನು ರಸ್ತೆಯ ಮಟ್ಟಕ್ಕೆ ತೆರವುಗೊಳಿಸಬೇಕಾಗಿ ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಉಪವಿಭಾಗ ರವರಿಗೆ ಸೂಚಿಸಿರುತ್ತಾರೆ

Scanned with CamScanner

7. **ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಬೊಮ್ಮನಹಳ್ಳಿ ವಲಯ ಸಂಬಂಧಪಟ್ಟಂತೆ**

- ಸುಬ್ರಮಣ್ಯಪುರ ಮುಖ್ಯರಸ್ತೆಯಿಂದ ಗುಬ್ಬಲಾಳ ಕಡೆಗೆ ಹೋಗುವ ರಸ್ತೆಯಲ್ಲಿ (ಹಳೆ ಪೋಸ್ಟ್ ಆಫೀಸ್ ಹತ್ತಿರ) ಇಟ್ಟಿರುವ ಚರಂಡಿ ಸ್ಲ್ಯಾಬ್‌ಗಳನ್ನು ತೆರವುಗೊಳಿಸಬೇಕಾಗಿ ಕೋರಿರುತ್ತಾರೆ.
- ಫಾಮ್ ಗ್ರೂವ್ ಎನ್‌ಕ್ಲೇವ್ ಟ್ರಾನ್ಸ್‌ಫರ್ ಬಳಿಯ ರಸ್ತೆ ಬದಿ ಚರಂಡಿಯಲ್ಲಿನ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಗುಬ್ಬಲಾಳ ಮುಖ್ಯರಸ್ತೆ ವೀರಾಂಜನೇಯ ದೇವಸ್ಥಾನದ ಹತ್ತಿರ ಕಿರಿದಾಗಿರುವ ರಸ್ತೆಯ ಭಾಗವನ್ನು ಅಗಲೀಕರಣಗೊಳಿಸಬೇಕಾಗಿ ಕೋರಿರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಚೈತ್ರಾ ಹೊನ್ನಾಪುರ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಶ್ರೀಮತಿ ಚೈತ್ರಾ ಹೊನ್ನಾಪುರ | ಶ್ರೀ ನರೇಂದ್ರ ಕುಮಾರ್.ಎ |
| ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾನೂನು ಅಧಿಕಾರಿ | ಸಂಚಾಲಕರು ಹಾಗೂ ಸ.ಅ–184 |
| ಕೇಂದ್ರ ಕಛೇರಿ | |

Scanned with CamScanner